ಹಾಕಿಸಿಕೊಳ್ಳುವ ಕ್ರಿಯೆ ಅತಿ ವೇಗವಾಗಿ ನಡಿಯುತಲಿತ್ತು. ಜನ ಉಸಿರೇ ಚಲಿಸದಷ್ಟು ದಟ್ಟವಾಗಿದ್ದರು. ಎಲ್ಲರ ಮೈವಾಸನೆಗಳು ಕಲೆತು ಅಲ್ಲೊಂದು ಸ್ವರ್ಗಲೋಕವೇ ಸೃಷ್ಟಿಯಾಗಿತ್ತು.

ಮೊದಲು ಹೋಗಿ ಮಲಗಿದ ದಢೂತಿ ಮಹಿಳೆಗೆ ಎರಡು ಸಿರಂಜಿನ ಠಸ್ಸೆಗಳು ಬಿದ್ದವು. ತಕ್ಷಣ ಆ ಹೆಣ್ಣುಮಗಳು ಎದ್ದು ಬೇರೆ ಮಹಿಳೆಗೆ ಅವಕಾಶ ಮಾಡಿ ಕೊಡಬೇಕಿತ್ತು. ಆದರೆ ಅಲ್ಲಿ ಹಾಗಾಗಲಿಲ್ಲ. ದಢೂತಿ ಹೆಂಗಸಿನ ಲಂಗದ ಲಾಡಿ ಎಲ್ಲೋ ತಪ್ಪಿಸಿಕೊಂಡಿತ್ತು. ಹಿಡಿತಕ್ಕೆ ಅದರ ತಲೆ ಸಿಕ್ಕಿರಲಿಲ್ಲ. ಅದು ಕೈಗೆ ಪ್ರಾಪ್ತವಾಗದೆ ಪಾಪ ಆಯಮ್ಮ ಏಳುವಂತಿರಲಿಲ್ಲ. ಅಲ್ಲಿನ ಸಮಯದ ವೇಗ ಅರಿಯದ ಆಕೆ ಉಸ್ಸೆಂದು ಏದುಸಿರು ಬಿಡುತ್ತಾ ತಣ್ಣಗೆ ಲಾಡಿಯ ತಡಕಾಡುತ್ತಾ ಮಲಗಿದಲ್ಲೇ ಕಾಲ ನೂಕುತ್ತಿದ್ದಳು.

ಇತ್ತ ಕಡೆ ತಿರುಗಿದ್ದ ಮಾವನವರು ಹೊಸ ಸೂಜಿಗೆ ಔಷಧಿ ಏರಿಸಿಕೊಂಡು ಸಿದ್ಧವಾಗಿ ನಿಂತರು. ಅವರ ಪ್ರಕಾರ ಈಗ ಹೊಸ ಪೇಷಂಟ್ ಚುಚ್ಚುವ ಜಾಗ ತೋರಿಸುತ್ತಾ ಟೇಬಲ ಮೇಲೆ ಪವಡಿಸಿರಬೇಕಿತ್ತು. ಇನ್ನೂ ಬುಸುಬುಸು ಎಂದು ಕೊಸರಾಡುತ್ತಿದ್ದ ಲಾಡಿ ಸಿಗದ ಆ ಹೆಂಗಸನ್ನೇ ಹೊಸ ಪಾರ್ಟಿಯೆಂದು ಭಾವಿಸಿದ ಮಾವ ಮೂರನೇ ಇಂಜಕ್ಷನ್ ಜಡಿದು ಬಿಟ್ಟರು. ಅವಳು ತನ್ನ ಸರದಿ ಇನ್ನೂ ಮುಗಿದಿಲ್ಲವೆಂಬಂತೆ ಅಲ್ಲೇ ಮಲಗಿರಲು ಆ ಕಡೆ ತಿರುಗಮ್ಮ ಜಲ್ದಿ ಎಂದು ಹೇಳಿ ನಾಲ್ಕನೆಯ ಸೂಚಿಯನ್ನು ಅವಳಿಗೆ ಕುಕ್ಕಿದರು. ತಬ್ಬಿಬ್ಬಾದ ಆಕೆ ಲಾಡಿ ಹುಡುಕುವುದನ್ನೇ ಕೈಬಿಟ್ಟು ಪಿಳಿಪಿಳಿ ಕಣ್ಣು ಬಿಡುತ್ತಾ ಕಕ್ಕಾಬಿಕ್ಕಿಯಾದಳು.

ಸರದಿಯ ಸಾಲಿನಲ್ಲಿ ನಿಂತಿದ್ದ ಮತ್ತೊಂದು ಹೆಣ್ಣುಮಗಳಿಗೆ ಚೀಟಿ ಬರೆದು ಕೊಡುತ್ತಾ, 'ನೋಡಮ್ಮ ಇಂಜಕ್ಷನ್ ಕೊಟ್ಟಿದ್ದೀನಿ. ಈ ಮಾತ್ರೆ ತಗೋ ಎಲ್ಲಾ ಸರಿ ಹೋಗುತ್ತೆ' ಎಂದರು. ಕಂಗಾಲಾದ ಆಕೆ 'ಡಾಕ್ಟ್ರೆ ನನಗೆಲ್ಲಿ ಚೂಜೀನೆ ಕೊಟ್ಟಿಲ್ಲ' ಎಂದು ರಾಗ ತೆಗೆದಳು. ಒಂದು ಕ್ಷಣ ಗಂಭೀರವಾದ ಮಾವ 'ಆಗ್ಲೆ ಕೊಟ್ಟೆನಲ್ಲಮ್ಮ. ಅದೇನು ಮರೆತೇ ಬಿಟ್ಟೆಯಾ' ಎಂದು ಸಹಜವಾಗಿ ಕೇಳಿದರು. 'ಓಯ್ ಅದೇನ್ ಸಾ... ನನಗೆಲ್ಲಿ ಕೊಟ್ರಿ. ನಾಕು ಆಯಮ್ಮನಿಗೇ ಚುಚ್ಚಿದರಲ್ಲ' ಎಂದು ಮಲಗಿದ್ದ ದಢೂತಿ ಹೆಂಗಸಿನ ಕಡೆ ಆಕೆ ಕೈ ತೋರಿಸಿದಳು. ಆಗ ನನ್ನ ಮರೆವಿನ ಮಾವನಿಗೆ ಆಗಿದ್ದ ಅನಾಹುತ ಗೊತ್ತಾಯಿತು.

ಎರಡರ ಜಾಗದಲ್ಲಿ ನಾಲ್ಕು ವರ ಪಡೆದ ದಢೂತಿ ಹೆಣ್ಣುಮಗಳು ಇನ್ನೂ ಮಲಗೇ ಇದ್ದಳು. ಅವಳೆಡೆಗೆ ನಗುತ್ತಾ ನೋಡಿದ ಮಾವ, 'ಏನೇ ತಾಯಿ ಹೇಳಕ್ಕಾಗಲ್ವ. ನಿಂದು ಮುಗಿದ ಮೇಲೆ ಎದ್ದು ಬೇರೆಯವರಿಗೆ ಜಾಗ ಕೊಡೋದಲ್ವೇನವ್ವ. ಇಷ್ಟೊಂದು ರಶ್‌ನಲ್ಲೂ ನಿಮ್ಮದೇನು ಪರಿಪಾಟಲು' ಎಂದು ಗಲ್ಲದ ಮೇಲೆ ಕೈಯಿಟ್ಟುಕೊಂಡು ನಿಂತರು. ಅಗತ್ಯಕ್ಕಿಂತ ಜಾಸ್ತಿ ಸೂಜಿಯ ದಾಳಿಗೆ ತುತ್ತಾಗಿದ್ದ ವನಿತೆ, 'ಈಗೇನ್ ಮಾಡೋದು ಸಾರ್' ಎಂದು ಆತಂಕದಿಂದ ಕೇಳಿದಳು. ಅಷ್ಟೇ ಸಮಾಧಾನ ಚಿತ್ತದಿಂದ ಮಾವ, 'ಏನು ಆಗಲ್ಲ ಎದ್ದೇಳು. ಜ್ವರ ಸಂಜೆ ಹೊತ್ತಿಗೇ ಓಡೋಗುತ್ತೆ. ನಿನಗೇನು ಇನ್ನು ಗುಳಿಗೇನೆ ಬ್ಯಾಡ. ಈಗ ಕೊಟ್ಟಿರೋ ಡೋಸೇಜೆ ತಡ್ಕೊ ಸಾಕು' ಎಂದರು. 'ದರಿದ್ರ ಲಾಡಿ ಈಗ ಸಿಕ್ತು ನೋಡಿ' ಎಂದು ಪೆಚ್ಚನೆಯ ಖುಷಿಯ ಜೊತೆ ಕಿರು ಆತಂಕವನ್ನೂ ಮೂಡಿಸಿಕೊಂಡು ಆಕೆ ಸೊಂಟ ಬಿಗಿದುಕೊಂಡಳು. ಸುತ್ತ ನಿಂತವರೆಲ್ಲಾ ಈ ಸೋಜಿಗ ಕಂಡು ಘೊಳ್ಳೆಂದು ನಕ್ಕರು. 'ಹೀಗೆ ಮರೆತು ನಿಮ್ಮಪ್ಪ ಇಲ್ಲೀತನಕ ಏನೇನು ಅನಾಹುತ ಮಾಡಿದ್ದಾರೋ ಏನೋ' ಎಂದು ನನ್ನ ಹೆಂಡತಿಗೆ ಮೊಟಕಿದರೂ ಕೊಂಚವೂ ವಿಚಲಿತಳಾಗದ ಆಕೆ, 'ನಮ್ಮಪ್ಪ ಹಂಗೆಲ್ಲಾ ಎಡವಟ್ಟು ಮಾಡೋದೇ ಇಲ್ಲ. ನೀವೇ ಸುಳ್ಳು ಬೊಗಳುತ್ತಿದ್ದೀರಿ' ಎಂದು ನನ್ನ ಬಾಯಿ ಮುಚ್ಚಿಸುತ್ತಾಳೆ.